## 7

# ಜೀವವನ್ನು ಸಂರಕ್ಷಿಸಿದ ಮನುಷ್ಯನು

## (2 ಅರಸು 8:1-6)

ಎಲೀಷ ಮತ್ತು ಶೂನೇಮ್ಯ ಸ್ತ್ರೀಯ ಕಥೆಯು, ಎಲೀಷನು ಜೀವವನ್ನು ಕೊಡುವ ಮತ್ತು ಜೀವವನ್ನು ಸಂರಕ್ಷಿಸುವ ಪ್ರವಾದಿಯು ಆಗಿದ್ದನು ಎಂಬುದನ್ನು ತೋರಿಸುವುದಾಗಿದೆ.[1] ಆತನಿಗೆ ಆದರಾಥಿತ್ಯ ಮಾಡಿದ ಒಡತಿಯು ಗಂಡು ಮಗುವಿನ ಆಶೀರ್ವಾದವನ್ನು ಹೊಂದಿದಾಗ ನಾವು ಆತನನ್ನು ಜೀವಕೊಡುವವನನ್ನಾಗಿ ನೋಡುತ್ತೇವೆ. ದೇವರ ಶಕ್ತಿಯಿಂದ ಆತನು ಆ ಹುಡುಗನ ಜೀವವನ್ನು ಮರಳಿ ತಂದಾಗ ಆತನನ್ನು ನಾವು ಜೀವವನ್ನು ಉಜ್ಜೀವಿಸಿದ ಮನುಷ್ಯ ಎಂದು ನೋಡಿದೆವು. ಈ ಪಾಠದಲ್ಲಿ, ನಾವು ಜೀವವನ್ನು ಸಂರಕ್ಷಿಸಿದವನೆಂದು ನೋಡುತ್ತೇವೆ, ದೇವರು ಆತನ ಮಾತುಗಳನ್ನೂ ಮತ್ತು ಪ್ರಭಾವವನ್ನೂ ಆ ಸ್ತ್ರೀ ಮತ್ತು ಅವಳ ಮಗನ ಜೀವವನ್ನು, ಸಂರಕ್ಷಿಸಲು ಉಪಯೋಗಿಸಿದನು.

*ಕರ್ತನೂ* ನಿಜವಾಗಿಯೂ ಕೊಡುವವನು, ಉಜ್ಜೀಸುವವನೂ ಮತ್ತು ಸಂರಕ್ಷಕನೂ ಆಗಿದ್ದಾನೆ; ಎಲೀಷನು ಕೇವಲ ಆತನ ನಿಯೋಗಿಯಾಗಿದ್ದಾನೆ ಎಂಬ ಆ ಎಲ್ಲಾ ಸರಣಿಗಳಲ್ಲಿನ ವಾಸ್ತವಾಂಶದ ದೃಷ್ಟಿಯನ್ನು ಮರೆತುಬಿಡಬೇಡಿರಿ. ಇಂದು, ದೇವರು ಇನ್ನೂ ಎಲ್ಲಾ ಜೀವಿಗಳ ಮೂಲನಾಗಿದ್ದಾನೆ. ಆತನು ಭೌತಿಕ ಜೀವಿತಕ್ಕೆ ಮೂಲನಾಗಿದ್ದಾನೆ: ಪೌಲನು, ದೇವರು "ತಾನೇ ಎಲ್ಲಾ ಜೀವಿಗಳಿಗೂ ಜೀವಶ್ವಾಸವನ್ನು ಕೊಡುವವನು" (ಅಪೊಸ್ತಲರ ಕೃತ್ಯಗಳು 17:25) ಎಂದು ಬರೆಯುತ್ತಾನೆ. ಆತನು ಆತ್ಮೀಕ ಜೀವಿತದ ಮೂಲವಾಗಿದ್ದಾನೆ: ಯೇಸು ತಾನು ಬಂದದ್ದು ನಮಗೆ "ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ" ಬಂದನು (ಯೋಹಾನ 10:10) ಎಂಬುದನ್ನು ಒತ್ತಿ ಹೇಳಿದ್ದಾನೆ. ಶೂನೇಮ್ಯ ಸ್ತ್ರೀಯಂತೆ, ನಾವೂ ಕೂಡಾ ಪುನಃ ಮತ್ತು ಪುನಃ "ಜೀವಿಸುವ ದೇವರಿಂದ" (1 ತಿಮೊಥೆ 4:10) ಆಶೀರ್ವಾದ ಹೊಂದುವವರಾಗಿರುತ್ತೇವೆ. ನಾನು ಮುಗಿಸುವ ಮುನ್ನ, ನಿಮಗೋಸ್ಕರ ದೇವರ ಕೃಪಾಪೂರಿತ ವ್ಯವಸ್ಥೆಯ ಅವಕಾಶವನ್ನು ನೀವು ತೆಗೆದುಕೊಂಡಿದ್ದೀರೋ ಇಲ್ಲವೋ ಎಂದು ನಾನು ಕೇಳುವವನಾಗಿದ್ದೇನೆ.

### ಬರದ ಆರಂಭದಲ್ಲಿ ದೇವರ ಸಂರಕ್ಷಣೆ (8:1, 2)

ಈ ಪಾಠಕ್ಕಾಗಿ, 2 ಅರಸುಗಳ ಅನೇಕ ಪಾಠಗಳನ್ನು ಓದದೇ ತಿರುಗಿಸಿ 8ನೇಯ ಅಧ್ಯಾಯಕ್ಕೆ ಹೋಗುವವನಾಗಿದ್ದೇನೆ. ಶೂನೇಮ್ಯ ಸ್ತ್ರೀಯ ಮಗನ ಜೀವವನ್ನು ಎಲೀಷನು ಉಜ್ಜೀವಿಸಿದ ನಂತರ, ಕೆಲವು ವರ್ಷಗಳು ದಾಟಿದವು. ಈ ಸಮಯದ ಆರಂಭದಲ್ಲಿ, ಎಲೀಷ ಮತ್ತು ಗೇಹಜಿ ಬಹು ನಿಶ್ಚಿತವಾಗಿ ಆ ಸ್ತ್ರೀಯಿಂದ ಕೊಡ ಮಾಡಿದ ಆತಿಥ್ಯದಲ್ಲಿ ಆನಂದಿಸುತ್ತಾ ಇದ್ದರು. ಅದಲ್ಲದೆ ಈ ವರ್ಷಗಳ ಆರಂಭದಲ್ಲಿ, ವೃದ್ಧನಾದಂತಹ ಆ ಸ್ತ್ರೀಯ ಗಂಡನು ಮರಣ ಹೊಂದಿದನು.[2]

ಕಥೆಯು ತೆರೆಯುತ್ತಿದ್ದಂತೆಯೇ, ಪ್ರವಾದಿಯು ತಿರುಗಿ ಅದರಾಥಿತ್ಯದ ದೇವರ ಸೇವಕಿಯ ಜೊತೆ ಮುಖಾಮುಖಿಯಾಗುತ್ತಾನೆ. ಬಹುಶಃ ಆತನು ಕರ್ಮೆಲ್ ಬೆಟ್ಟಕ್ಕೆ ಮತ್ತು ಬೆಟ್ಟದಿಂದ ತನ್ನ ಮಾರ್ಗಕ್ಕೆ ಹೋಗುವುದನ್ನು ನಿಲ್ಲಿಸಿರಬೇಕು. "ಎಲೀಷನು ತಾನು ಬದುಕಿಸಿದ ಹುಡುಗನ ತಾಯಿಗೆ - ಯೆಹೋವನು ಈ ದೇಶಕ್ಕೆ ಏಳು ವರುಷ ಬರವನ್ನು[3] ಕಳುಹಿಸುವುದಕ್ಕಿರುತ್ತಾನೆ. ಆದುದರಿಂದ ನೀನು ನಿನ್ನ ಮನೆಯವರೊಡನೆ ಯಾವದಾದರೊಂದು ಪರದೇಶಕ್ಕೆ ಹೋಗಿ

ಅಲ್ಲಿ ವಾಸಿಸು" ಎಂದು ಹೇಳಿದನು (ವಚನ 1).

*"ಯೆಹೋವನು ಈ ದೇಶಕ್ಕೆ ಏಳು ವರುಷ ಬರವನ್ನು ಕಳುಹಿಸುವುದಕ್ಕಿರುತ್ತಾನೆ."* ಎಂಬ ಮಾತುಗಳನ್ನು ಗಮನಿಸಿರಿ. ಬರವು ಒಂದು ದಿವ್ಯ ಶಿಕ್ಷೆಯಾಗಿತ್ತು. ಮೊದಲ ಆಜ್ಞೆಯಲ್ಲಿ ದೇವರ ಒಡಂಬಡಿಕೆಯಾದ "ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು" (ವಿಮೋಚನಾಕಾಂಡ 20:3) ಎಂಬುದು ದೇವರ ಮಕ್ಕಳ ಜೊತೆಯಲ್ಲಿ ಇರುವ ಆಜ್ಞೆಯಾಗಿದೆ, ಆದರೆ ಉತ್ತರದ ರಾಜ್ಯವು ಆ ಆಜ್ಞೆಯನ್ನು ಅಲಕ್ಷಿಸಿತ್ತು. ಅದಕ್ಕಾಗಿ ಕರ್ತನು ಎಚ್ಚರಿಸಿದ್ದನು.

> ... ನೀವು ನನ್ನ ಮಾತಿಗೆ ಲಕ್ಷಕೊಡದೆ ಹೋದರೆ ನಾನು ನಿಮ್ಮ ಪಾಪಗಳ ನಿಮಿತ್ತ ಏಳರಷ್ಟಾಗಿ ನಿಮ್ಮನ್ನು ಶಿಕ್ಷಿಸುವೆನು ... ನಿಮ್ಮ ಮೇಲಿರುವ ಆಕಾಶವನ್ನು ಕಬ್ಬಿಣದಂತೆಯೂ ನೀವು ಸಾಗುವಳಿ ಮಾಡುವ ಭೂಮಿಯನ್ನು ತಾಮ್ರದಂತೆಯೂ ಮಾಡುವೆನು; ನೀವು ದುಡಿದಿದ್ದೆಲ್ಲಾ ವ್ಯರ್ಥವಾಗುವದು; ನಿಮ್ಮ ಭೂಮಿಯಲ್ಲಿ ಬೆಳೆಯಾಗುವುದಿಲ್ಲ, ತೋಟಗಳ ಮರಗಳು ಫಲಿಸುವುದಿಲ್ಲ (ಯಾಜಕಕಾಂಡ 26:18-20).

ದೇವರು ತನ್ನ ಜನರನ್ನು ಶಿಕ್ಷಿಸಲು ಬರವನ್ನು ಬಳಸಿದನು (ನೋಡಿರಿ ಹಗ್ಗಾಯ 1:9-11) ಮತ್ತು ಅವರಿಗೆ ಪಶ್ಚಾತ್ತಾಪಪಡಲು ಕರೆಕೊಟ್ಟನು (ನೋಡಿರಿ 1 ಅರಸು 8:35-40). ದೇವರು ಎಲೀಯನ ಕಾಲದಲ್ಲಿ ಮೂರುವರೆ ವರ್ಷಗಳ ಕಾಲದ ಬರವನ್ನು ಬರಮಾಡಿದನು (ನೋಡಿರಿ 1 ಅರಸು 17:1; ಯಾಕೋಬ 5:17); ಈ ಸಾರಿ ಆತನು ಆ ಅವಧಿಯನ್ನು ದ್ವಿಗುಣಗೊಳಿಸಿದನು: ಇದು ಏಳು ವರುಷದ ಕಡೆಯ ಬರವಾಗಿತ್ತು (ಆದಿಕಾಂಡ 41:27 ರೊಂದಿಗೆ ಹೋಲಿಸಿರಿ). ಎಲೀಷನು ಬರದ ಅನಾಹುತದ ಕಷ್ಟದಿಂದ ಆ ಸ್ತ್ರೀಯನ್ನು ಉಳಿಸಲು ಬಯಸಿದ್ದನು. ಆತನು ಆಕೆಗೆ ಬರವು ಹೋಗುವ ತನಕ ಅವಳ ಮನೆಯವರೆಲ್ಲರನ್ನೂ ತೆಗೆದುಕೊಂಡು ಬೇರೆಲ್ಲಾದರೂ ಹೋಗಲು ಹೇಳಿ ದನು (ರೂತ 1:1, 6ರೊಡನೆ ಹೋಲಿಸಿರಿ).

ಆದರೆ "ವಿಗ್ರಹಾರಾಧನೆಯ ಕಾರಣದಿಂದ ರಾಷ್ಟ್ರದ ಮೇಲೆ ನ್ಯಾಯತೀರ್ಪು ಬಂದಿತು ಆದರೆ, ಅದು ಆ ಸ್ತ್ರೀಯ ಮೇಲೆ ಯಾಕೆ ಬರಬೇಕು? ಅವಳು ವಿಗ್ರಹಾರಾಧನೆಯ ದೋಷಣೆಯನ್ನು ಹೊಂದಿರಲಿಲ್ಲ." ಎಂಬ ಅಕ್ಷೇಪವು ಇಲ್ಲಿ ಉದ್ಭವಿಸುತ್ತದೆ. ಒಂದು ವೇಳೆ ಇದರಿಂದ ಪಾಠವನ್ನು ಕಲಿಯದೇ ಹೋದರೆ, ಅದನ್ನು ಕಲಿಯುವದು ನಿಮಗೆ ಅವಶ್ಯವಿದೆ; ಮನುಕುಲವೆಲ್ಲವೂ ಒಬ್ಬರಮೇಲೊಬ್ಬರು ಅವಲಂಭಿತರಾಗಿದ್ದಾರೆ (ನೋಡಿರಿ ರೋಮಾಪುರ 14:7), ಮತ್ತು ಒಬ್ಬನಿಗೆ ಏನು ಸಂಭವಿಸುತ್ತದೆಯೋ ಅದು ಇನ್ನೊಬ್ಬನ ಮೇಲೆ ಪರಿಣಾಮ ಬೀರುತ್ತದೆ. ಪಾಪವು ಈ ಲೋಕವನ್ನು ಶಪಿಸಿದೆ (ನೋಡಿರಿ ಆದಿಕಾಂಡ 2:17; ರೋಮಾಪುರ 5:12) ಮತ್ತು ದೋಷವಿಲ್ಲದವರೆಲ್ಲರೂ ದೋಷದೊಂದಿಗೆ ಕಷ್ಟಪಡುತ್ತಿದ್ದಾರೆ. ಈ ಸತ್ಯದ ಪುರಾವೆಯೊಂದಿಗಿನ ಚುಚ್ಚುಮದ್ದಿನ ಸೂಜಿಗಳನ್ನು ಚೆನ್ನಾಗಿ ಕುದಿಸದೆ ಹಾಗೇಯೆ ಚುಚ್ಚುಮದ್ದನ್ನು ತೆಗೆದುಕೊಂಡ ಕಾರಣದಿಂದ ರೋಮಾನಿಯಾದಲ್ಲಿನ ಮುಗ್ಧ ಮಕ್ಕಳು ಏಡ್ಸ್ ರೋಗ ಹೊಂದಿರುವಂತಹ ಉದಾಹರಣೆಗಳು ನನ್ನ ಮನದಲ್ಲಿ ಉಕ್ಕಿಹರಿಯುತ್ತಿವೆ. ರಾಷ್ಟ್ರದ ಪಾಪದಿಂದ ಉಂಟಾಗುವ ಇಂತಹ ಸಂಕಷ್ಟಗಳಿಂದ ಆ ಸ್ತ್ರೀಯು ಪಾರಾಗಲಿ ಎಂದು ಎಲೀಷನು ಬಯಸಿದ್ದನು, ಅಂತೆಯೆ ಆಕೆಯು ಇಸ್ರಾಯೇಲನ್ನು ಬಿಡಲು ಆತನು ಅವಸರಿಸಿದನು.

ಪ್ರವಾದಿಯ ಸೂಚನಗಳಿಗೆ ವಿಧೇಯವಾಗುವದು ಶೂನೇಮ್ಯಳಿಗೆ ಸರಳವಾದ ಕೆಲಸವಾಗಿರಲಿಲ್ಲ. ಇದ್ದ ಊರಲ್ಲಿ ಇರುವದರಲ್ಲಿ ತನ್ನ ಕುಟುಂಬದವರ ಹತ್ತಿರ ಮತ್ತು ಸ್ನೇಹಿತರ ಹತ್ತಿರ ಇರುವುದರಲ್ಲಿ ಆಕೆ ಆನಂದಿಸುವವಳಾಗಿದ್ದಳು (ನೋಡಿರಿ 2 ಅರಸು 4:13). ಅಲ್ಲದೇ, ಎಲೀಷನು ಹೇಳಿದ ಸಮಯದಲ್ಲಿ, ಬಹುಶಃ ಅಲ್ಲಿ ಬರದ ಸೂಚನೆಯೇನೂ ಇರಲಿಲ್ಲ: ಹುಲ್ಲು ಇನ್ನೂ ಹಸಿರಾಗಿಯೆ ಇತ್ತು, ಹೂಗಳು ಇನ್ನೂ ಅರಳಿದ್ದು, ಮತ್ತು ಹೊಲಗಳು ಫಲಗಳಿಂದ ತುಂಬಿದ್ದವು. ತನ್ನ ಎಲ್ಲಾ ಮನೆಯವರೊಂದಿಗೆ ಇನ್ನೊಂದು ದೇಶಕ್ಕೆ ಹೋಗುವದು

ನಂಬಿಕೆಯ ಕ್ರಿಯೆಯಾಗಿತ್ತು. ಹಿಂದೆ ಆ ಸ್ತ್ರೀಯು ಪ್ರವಾದಿಯ ಮಾತುಗಳನ್ನು ಒಪ್ಪಿಕೊಳ್ಳುವಲ್ಲಿ ಕಷ್ಟಪಟ್ಟಿದ್ದಳು (2 ಅರಸು 4:16, 28) ಆದರೆ ಈಗ ಅವಳು ಸಂದೇಹಿಸಲಿಲ್ಲ (2 ಅರಸು 8:2ಎ). ದುರಂತ ಮತ್ತು ಅದರ ಪರಿಣಾಮ ಅವಳ ನಂಬಿಕೆಯನ್ನು ಬಲಗೊಳಿಸಿದ್ದವು. ಸಮಸ್ಯೆಯು ಹಾಗೆ ನಿನ್ನ ಮೇಲೆ ಪರಿಣಾಮ ಉಂಟುಮಾಡುತ್ತದೆ (ನೋಡಿರಿ ರೋಮಾಪುರ 5:3, 4; ಯಾಕೋಬ 1:3).

ಆಕೆಯು "ದೇವರ ಮನುಷ್ಯನ ಅಪ್ಪಣೆಯಂತೆ ತನ್ನ ಮನೆಯವರೊಡನೆ ಸ್ವದೇಶವನ್ನು ಬಿಟ್ಟುಹೋಗಿ ಫಿಲಿಷ್ಟಿಯರ ದೇಶದಲ್ಲಿ ಏಳು ವರುಷ ವಾಸವಾಗಿದ್ದಳು" (2 ಅರಸು 8:2ಬಿ). ಫಿಲಿಷ್ಟೀಯವು ಸದಾಕಾಲವೂ ದೇವ ಜನರ ವಿರೋಧಿಯಾಗಿತ್ತು (ನೋಡಿರಿ 1 ಸಮುವೇಲ 4:10; 13:5); ಆದರೆ ನಮ್ಮ ಕಥೆಯ ಸಮಯದಲ್ಲಿ, ಇಸ್ರಾಯೇಲು ಆರಾಮ್ಯರ (ಸಿರಿಯಾ) ಜೊತೆ ಯುದ್ಧದಲ್ಲಿ ಇತ್ತು (2 ಅರಸು 5:2; 6:8, 24), ಹೊರತು ಫಿಲಿಷ್ಟೀಯ ವಲ್ಲ. "ಫಿಲಿಷ್ಟೀಯ ಪ್ರದೇಶವು" (ಫಿಲಿಷ್ಟೀಯ) ಕರಾವಳಿ ಪ್ರದೇಶವಾಗಿದೆ ("ಎಲೀಷನ ದಿನಗಳಲ್ಲಿ ಇಸ್ರಾಯೇಲು ಮತ್ತು ಸುತ್ತಲಿನ ರಾಜ್ಯಗಳನ್ನು" ತೋರಿಸುವ ನಕಾಶೆಯನ್ನು ಈ ಪಾಠದಲ್ಲಿ ಮತ್ತೊಂದು ಕಡೆ ನೋಡಿರಿ). ಫಲವತ್ತಾದ ಫಿಲಿಷ್ಟೀಯ ಮೈದಾನವು ಪರ್ವತಗಳ ಒಳನಾಡುಗಳಂತ್ತಿದ್ದು ಬರದಿಂದ ತತ್ತರಿಸುತ್ತಿರಲಿಲ್ಲ. ಆ ಪ್ರದೇಶದ ನಾಗರೀಕರು ಸಮುದ್ರದಿಂದ ಅನೇಕ ಸಂಗತಿಗಳು ಅವರಿಗೆ ಪೂರೈಸಲಾಗುತ್ತಿತ್ತು. ಆದ್ದರಿಂದ, ಆ ಸ್ತ್ರೀಯು ಹೋಗುವುದಕ್ಕಾಗಿ ಆ ಸ್ಥಳವನ್ನು ಆರಿಸಿಕೊಂಡಳು (2 ಅರಸು 8:2ಸಿ).

## ಅಪಚಾರದ ಅವಧಿಯಲ್ಲಿ ದೇವರ ವ್ಯವಸ್ಥೆಗಳು (8:3-6)

"ಏಳು ವರುಷಗಳಾದ ನಂತರ ಮೇಲೆ ಆಕೆಯು ಅಲ್ಲಿಂದ ಸ್ವದೇಶಕ್ಕೆ ಬಂದು ಪರಾದೀನವಾಗಿದ್ದ ತನ್ನ ಹೊಲಮನೆಗಳಿಗಾಗಿ ಮೊರೆಯಿಡುವುದಕ್ಕೋಸ್ಕರ ಅರಸನ ಬಳಿಗೆ ಹೋದಳು" (ವಚನ 3ಎ). ಅವಳು ಶೂನೇಮ್ಯವನ್ನು ಮುಟ್ಟಿದ ನಂತರ, ಅವಳು ಆಘಾತಕ್ಕೊಳಗಾಗಿರಬಹುದು. ಇನ್ನೊಂದು ಕುಟುಂಬವು ಅವಳ ಮನೆಯಲ್ಲಿ ವಾಸಿಸುತ್ತಿತ್ತು! ಬಹುಶಃ ಬೆರೋಬ್ಬರು ಆಕೆಯ ಹೊಲದಲ್ಲಿ ಕೆಲಸಮಾಡುತ್ತಿದ್ದರು! ಅಶುದ್ಧರಾದ ನೆರೆಯವರು ಅಥವಾ ದುರಾಶೆಯ ವಿವಾಹ ಸಂಬಂಧಿಗಳು ಆ ಆಸ್ತಿಯನ್ನು ತೆಗೆದುಕೊಂಡಿರಬಹುದು. ಬಹುಶಃ ಅರಸನಿಂದ ಮುಟ್ಟುಗೋಲು ಹಾಕಲ್ಪಟ್ಟಿರಬೇಕು (ನೋಡಿರಿ 1 ಅರಸು 21:15). ಪರಿಪಾಲಕರಿಲ್ಲದ ವಿಧವೆಯರು ಯಾವಾಗಲೂ ಇಂತಹ ದುರ್ವ್ಯವಹಾರದ ನಡಿಸಿಕೊಳ್ಳುವಿಕೆಗೆ ಒಳಗಾಗುತ್ತಾರೆ (ನೋಡಿರಿ ಯೆಶಾಯ 10:2; ಮತ್ತಾಯ 23:14).

ಇತ್ತೀಚೆಗೆ, ಎಲೀಷನು ಅರಸನ ಮುಂದೆ ಅವಳ ಪರವಾಗಿ ಮಾತನಾಡುವುದಕ್ಕಾಗಿ ಮುಂದಾಗಿದ್ದನು (2 ಅರಸು 4:13), ಆದರೆ ಆತನ ಆ ಕೇಳಿಕೆಯನ್ನು ಆಕೆಯು ನಿರಾಕರಿಸಿದ್ದಳು. ಈಗ ಆಕೆ ಸ್ವತಃ ತನ್ನ ಆಸ್ಥಿತಿಯನ್ನು ಮರಳಿ ಪಡೆಯಲು ಪ್ರಯತ್ನಿಸಲು ಅರಸನ ಮುಂದೆ ಭಿನ್ನಹವನ್ನು ಮಾಡಲು ಹೋದಳು (8:3). Donald Wisemanರ ಪ್ರಕಾರ, "ಅರಸನೇ ಭೂಮಿಯ ಭೋಗಾವಧಿಯ ಎಲ್ಲಾ ಸಂಗತಿಗಳಿಗೆ ಮನವಿಯನ್ನು ಸಲ್ಲಿಸುವ ನ್ಯಾಯಸ್ಥಾನವಾಗಿದ್ದನು"[4] ಎಂದು. ಸ್ತ್ರೀಯಾದಂತಹ ಅವಳು ತನ್ನ ಪ್ರಕರಣವನ್ನು ಸಿದ್ಧಪಡಿಸಿ ಮಂಡಿಸಿದ್ದಾದರೆ, ಅದರಲ್ಲಿ ಆಕೆಯು ಬಹುಶಃ ಅಶಕ್ತವಾಗುತ್ತಿದ್ದಳು. ಒಂದು ನಿಯಮದಂತೆ ರಾಜಕೀಯ ನೀತಿಯಲ್ಲಿ ಸ್ತ್ರೀಯ ಮಾತುಗಳು ಅಗಣ್ಯವಾಗಿದ್ದವು.

ತನಗಾಗಿ ದೇವರು ಯಾವ ಮರ್ಗವನ್ನು ಸಿದ್ಧಮಾಡಿದ್ದಾನೆ ಎಂಬುದು ಶೂನೇಮ್ಯಳು ತಿಳಿದಿರಲಿಲ್ಲ. ಅವಳು ಅರಸನ ಕೋಣೆಗೆ ಹೋಗುತ್ತಿದ್ದಂತೆಯೇ "ಅರಸನು ದೇವರ ಮನುಷ್ಯನ ಸೇವಕನಾದ ಗೇಹಜಿಯ ಜೊತೆ ಮಾತನಾಡುತ್ತಾ ಕೂತಿದ್ದನು" (ವಚನ 4ಎ). ಗೇಹಜಿಯು ಯಾಕೆ ಅಲ್ಲಿದ್ದನೋ ನಮಗೆ ತಿಳಿಯದು. ಪ್ರಾಯಶಃ ಎಲೀಷನು ಒಂದು ಸದೇಶದೊಡನೆ ಆತನನ್ನು ಅಲ್ಲಿಗೆ ಕಳುಹಿಸಿರಬಹುದು. ಪ್ರಾಯಶಃ ಅರಸನು ಪ್ರಸಿದ್ಧನಾದ ಪ್ರವಾದಿಯ ಬಗೆ

ಕುತೂಹಲವುಳ್ಳವನಾಗಿದ್ದು, ಆತನ ಸೇವಕನ ಸನ್ನಿಧಿಗಾಗಿ ವಿನಂತಿಸಿರಬಹುದು.[5] ಕಾರಣ ಏನೇ ಇರಲಿ, ಗೇಹಜಿಯು ಆ ಭೂಪತಿಯ ಹತ್ತಿರ ಇದ್ದನು ಮತ್ತು ಅರಸನು ಗೇಹಜಿಗೆ "ಎಲೀಷನು ಮಾಡಿದ ಎಲ್ಲಾ ಮಹತ್ಕಾರ್ಯಗಳನ್ನು ನನಗೆ ವಿವರಿಸು" ಎಂದು ಹೇಳಿದನು (ವಚನ 4ಬಿ).

ಆ ಅರಸನು ಯಾರು ಎಂಬುದರ ಬಗೆಗೆ ನಮಗೆ ನಿಶ್ಚಿತತೆಯು ಇಲ್ಲ. "ಏಳು ವರುಷದ ಬರಗಾಲವು" ಯೋರಾಮನ ಆಳ್ವಿಕೆಯ ಮಧ್ಯಭಾಗದಲ್ಲಿ ಕಾಣಿಸಿಕೊಂಡಿತ್ತು.[6] ಹೀಗಾಗಿ 2 ಅರಸು 8:1-6ರಲ್ಲಿನ ಅರಸನು ಪ್ರಾಯಶಃ ಯೋರಾಮನು ಆಗಿರಬಹುದು. ಹೇಗೋ, ಇದು ಸಾಧ್ಯವಿದೆ, ಆತನು ಯೇಹುವಿನ ನಂತರದ ಅರಸನಾಗಿದ್ದನು.[7] "ಅರಸನು ಯಾರಾಗಿದ್ದನು ಎಂಬುದು ಯಾವ ಭಿನ್ನತೆಯನ್ನೂ ಮಾಡುವುದಿಲ್ಲ"[8] ಈ ಪರಿಚ್ಛೇದದಲ್ಲಿನ ದೇವರ ಉದ್ದೇಶವು ಅರಸನ ಶೋಕೇಸ್ ಆಗಿರಲಿಲ್ಲ. ಆದರೆ ನಂಬಿಕೆ ಮತ್ತು ವಿಧೇಯತೆಯು ಪ್ರತಿಫಲವಾಗುತ್ತದೆ ಎಂಬುದರ ಪ್ರಾಯೋಗಿಕರವಾಗಿತ್ತು.

ಒಂದು ವೇಳೆ ಯೋರಾಮ ಆ ಅರಸನಾಗಿದ್ದರೆ, ಆತನು ಈಗಾಗಲೇ ಎಲೀಷನು ಹೇಗೆ ತನ್ನ ಸೈನ್ಯವನ್ನು ಎದೋಮಿನ ಅರಣ್ಯದಲ್ಲಿ ಕಾಪಾಡಿದ್ದನು ಎಂಬುದನ್ನು ಬಲ್ಲವನಾಗಿದ್ದನು. ಆತನು ಇತರ ಅದ್ಭುತಗಳ ಗಾಳಿಸುದ್ಧಿಗಳನ್ನೂ ಕೇಳಿದ್ದನು ಎಂಬುದರಲ್ಲಿ ಸಂಶಯವಿಲ್ಲ. ಈಗ ಆತನು ಅದನ್ನು ಸಂಪೂರ್ಣವಾಗಿ ಕೇಳಲು ಬಯಸಿದ್ದನು. ಪ್ರಾಯಶಃ ಗೇಹಜಿಯು ಮುಖಸ್ತುತಿಯಿಂದ ಲಕ್ಷವಹಿಸಿದನು ಮತ್ತು ಕೇಳುವುದರಿಂದ ಪುಳಕಿತನಾದನು. ಎಲೀಷನು ಉಪ್ಪುನೀರನ್ನು ಹೇಗೆ ಶುದ್ಧಮಾಡಿದನು. ಪ್ರವಾದಿಯು ಹೇಗೆ ಎಣ್ಣೆಯನ್ನು ಹೆಚ್ಚಿಸಿದನು, ಮತ್ತು ಪ್ರವಾದಿಯ ಬೋಳು ತಲೆಯನ್ನು ನೋಡಿ ಅಣುಕಿಸಿದ ಪುಂಡ ತರುಣರಿಗಾದ ಶಿಕ್ಷೆಯೂ ಕೂಡ ಅದರಲ್ಲಿ ಒಳಗೊಂಡಿರುವುದನ್ನು ಹೇಳುತ್ತಿರುವ ಆತನನ್ನು ನಾನು ಊಹಿಸಿಕೊಳ್ಳಬಲ್ಲೆ. (ಒಂದು ವೇಳೆ ಅರಸನು ಬೋಳುತಲೆಯವನಾಗಿದ್ದರೆ, ಈ ಕೊನೆಯ ಕಥೆಯನ್ನು ಕೇಳಿ ಆನಂದಿತನಾಗಿರಬಹುದು,) ಈ ವಿವರಣೆಗಳಲ್ಲಿ ಪ್ರಮುಖವಾದ ಸುದ್ಧಿ ಎಂದರೆ ಸತ್ತ ಹುಡುಗನನ್ನು ಜೀವದಿಂದ ಎಬ್ಬಿಸಿದ್ದು! ಸತ್ತವನನ್ನು ಎಬ್ಬಿಸುವದು, ಅದ್ಭುತಗಳನ್ನು ಮಾಡುವವರಲ್ಲಿಯೂ ಕೂಡಾ ಪ್ರತಿನಿತ್ಯದ ವ್ಯವಹಾರವಲ್ಲ. ಹಳೆಯ ಒಡಂಬಡಿಕೆಯಲ್ಲಿ ಸತ್ತವರನ್ನು ಎಬ್ಬಿಸುವದರ ಸಂಗತಿಗಳಲ್ಲಿ ಕೇವಲ ಮೂರು ಮಾತ್ರ ಇವೆ (1 ಅರಸು 17: 2 ಅರಸು 4; 13), ಮತ್ತು ಅವುಗಳಲ್ಲಿ ಎರಡು ಎಲೀಷನಿಗೆ ಸಂಬಂಧಿಸಿದವುಗಳು ಆಗಿವೆ.

ಗೇಹಜಿಯು ಈ ಭಾವಾನಾತ್ಮಕವಾದ ವಿವರಣೆಯ ಮಧ್ಯದಲ್ಲಿರುವಾಗ, ಆ ಸ್ತ್ರೀ ಮತ್ತು ಅವಳ ಮಗ ಸಿಂಹಾಸನದ ಕೋಣೆಗೆ ಬಂದರು (2 ಅರಸು 8:5ಎ)! ಇದೇನು ಕಾಕತಾಳೀಯವಲ್ಲ; ಇದು ದೇವರು ವ್ಯವಸ್ಥೆ ಮಾಡಿದ ಸಂಗತಿ, ಇದರ ಮೂಲಕ ಅರಸನು ಆಸ್ತ್ರೀಯೊಂದಿಗೆ ಮತ್ತು ಆಕೆಯ ಭಿನ್ನಹದೊಂದಿಗೆ ಪ್ರಭಾವಿತನಾಗುವುದಕ್ಕಾಗಿಯೇ. ನಾವು ಇದನ್ನು ದೇವರ *ಒದಗಿಸುವಿಕೆ* ಎಂದು ಕರೆಯುತ್ತೇವೆ (ರೋಮಾಪುರ 8:28): ದೇವರ ಒದಗಿಸುವಿಕೆಯು ಆತನಿಗಾಗಿ ನಿಸರ್ಗದ ನಿಯಮದ ಮೂಲಕವೇ ಆಗಿರುತ್ತದೆ. ದೇವರ ಮಾರ್ಗಗಳು ಎಷ್ಟು ಅದ್ಭುತವಾದವುಗಳು!

ಈತನು ಆ ಸ್ತ್ರೀಯನ್ನು ಆಶ್ಚರ್ಯಚಕಿತನಾಗಿ ನೋಡುತ್ತಾನೆ, ಗೇಹಜಿಯು ಅವಳನ್ನು ತೋರಿಸುತ್ತಾ ಧ್ವನಿಯಲ್ಲಿ ಭಾವಾವೇಶ ತುಂಬಿಕೊಂಡು "ಅರಸನೇ, ನನ್ನ ಒಡೆಯನೇ, ಎಲೀಷನು ಬದುಕಿಸಿದ ಹುಡುಗನು ಇವನೇ, ಈಕೆಯು ಇವನ ತಾಯಿ" ಎಂದು ಹೇಳಿದನು (2 ಅರಸು 8:5ಬಿ). ಸೂಚ್ಯವಾದ ಸಲಹೆಯೆಂದರೆ "ನಿನ್ನಂದ ನೀನೇ ಅವಳನ್ನು ಕೇಳು!" ಎಂಬುದೇ. ಅರಸನು ಈ ಕಥೆಯನ್ನು ಖಚಿತಗೊಳಿಸಲು ಆ ಸ್ತ್ರೀಗೆ ಕೇಳಿದನು. ಪ್ರಾಯಶಃ ಆಕೆಯು ಮುಖದ ಮೇಲೆ ನಗೆಯನ್ನು ತಂದುಕೊಂಡು ತನ್ನ ಪ್ರೀಯ ಮಗನನ್ನು ತೋಳುಗಳಿಂದ ಬಳಸಿ ಅವಳ ತುಟಿಯಿಂದ ಸದಾಕಾಲವೂ ಬರುತ್ತಿದ್ದ ಆ ಕಥೆಯನ್ನು ತಿರುಗಿ ಹೇಳಿದಳು (ವಚನ 6ಎ).

ಅರಸನು ಪ್ರಭಾವಿತನಾದನು, "ಆ ವಿಧವೆ ಮತ್ತವಳ ಮಗನ ದೇವರ ಒದಗಿಸುವಿಕೆಯ ಸಜ್ಜೀವ ಉದಾಹರಣೆಯೂ ಮತ್ತು ಪ್ರವಾದಿಯ ಮೂಲಕ ಕರ್ತನ ವಾಕ್ಯಗಳಿಗೆ ವಿಧೇಯರಾಗುವವರಿಗೆ ಆಶೀರ್ವಾದವೂ ಆಗಿದ್ದರು."[9] ಜೀವ ಮತ್ತು ಮರಣದ ಮೇಲೆ ಶಕ್ತಿಯನ್ನು ಹೊಂದಿದ ಮನುಷ್ಯನ ಜೊತೆ ಹತ್ತಿರವಾದ ಈ ಸ್ತ್ರೀಗೆ ಒಳ್ಳೇಯದನ್ನು ಮಾಡಲೇ ಬೇಕು ಎಂಬ ನಿರ್ಧಾರಕ್ಕೆ ಭೂಪಾಲನು ಸ್ಪಷ್ಟವಾಗಿ ಬಂದನು. ವಾಸ್ತವವಾಗಿ, ಆಕೆಯು ಕೇಳಿದ್ದಕ್ಕಿಂತಲೂ *ಹೆಚ್ಚಿನದನ್ನು* ಮಾಡಲು ಅರಸನು ನಿರ್ಧರಿಸಿದ್ದನು. ಆಕೆಯು ತನ್ನ ಆಸ್ತಿಯನ್ನು ಹಿಂದಕ್ಕೆ ಕೊಡಿಸಲು ಕೇಳಿದಳು; ಆತನು ಆ ಆಸ್ತಿಯ ಜೊತೆ ಆ ಆಸ್ತಿಯಿಂದ ಬಂದ ಲಾಭವನ್ನು ಹಿಂದಕ್ಕೆ ಕೊಡಿಸಿದನು.[10] ಆತನು ಅವಳ ಪ್ರಕರಣಕ್ಕಾಗಿ ಒಬ್ಬ "ನಿಶ್ಚಿತವಾದ ಅಧಿಕಾರಿಯನ್ನು" ನೇಮಿಸಿದನು ಮತ್ತು ಆತನಿಗೆ "ಹೋಗಿ ಈಕೆಯ ಹೊಲಮನೆಗಳನ್ನೆಲ್ಲಾ ಈಕೆಯು ದೇಶವನ್ನು ಬಿಟ್ಟಂದಿನಿಂದ ಇಂದಿನವರೆಗೂ ಈಕೆಗೆ ಸಲ್ಲತಕ್ಕ ಹೊಲದ ಆದಯವನ್ನೂ ಕೊಡಿಸು" ಎಂದು ಹೇಳಿದನು (ವಚನ 6ಬಿ).

ಆ ಸ್ತ್ರೀಯು ನಿಶ್ಚಿತವಾಗಿ ಸಂತೋಷದಿಂದ ಅರಸನ ಆಸ್ಥಾನದಿಂದ ಹೊರಟು ಹೋಗಿರ ಬೇಕು. ಅವಳಿಗೆ ಮರಳಿ ಕೊಡಲ್ಪಟ್ಟಿತು, ಎಲೀಷನೊಡನೆಯ ತನ್ನ ಸಂಬಂಧಕ್ಕೆ ಅವಳು ವಂದನೆಗಳನ್ನು ಸಲ್ಲಿಸಿದಳು. ಪ್ರವಾದಿಯು ಈಗ ಅವಳನ್ನು ಮನೆಗೆ ದ್ವಿಗುಣವಾಗಿ ಸ್ವಾಗತಿಸಿರಬೇಕು ಮತ್ತು ಆತನು ಆಕೆಯ ಹಳ್ಳಿಯ ಮೂಲಕ ಹಾದುಹೋಗುವಾಗಲೆಲ್ಲಾ ಅಹಲ್ಲಾದಕರವಾದ ತಾಸುಗಳನ್ನು ಅವಳ ಮನೆಯಲ್ಲಿ ಕಳೆಯುವುದನ್ನು ಮುಂದುವರೆಸಿದನು ಎಂದು ನಾವು ನಿಶ್ಚಿತವಾಗಿ ಹೇಳಬಹುದು. ಆ ಸಕಾರಾತ್ಮಕ ಗಮನಿಸುವಿಕೆಯಲ್ಲಿ ನಾವು ಎಲೀಷ ಮತ್ತು ಶೂನೇಮ್ಯ ಸ್ತ್ರೀಯ ಭೇಟಿ ಕಥೆಯನ್ನು ಬಿಡಲೇಬೇಕು.

## ಮುಕ್ತಾಯ

ಈ ಪಾಠವನ್ನು ನಾನು ಮುಗಿಸುತ್ತಿದ್ದಂತೆಯೆ, ದೇವರು ಕೊಡುವವನಾಗಿದ್ದಾನೆ, ಉಜ್ಜೀವಿಸುವವನಾಗಿದ್ದಾನೆ ಮತ್ತು ನಮ್ಮ ಜೀವಿತವನ್ನು ಸಂರಕ್ಷಿಸುವವನಾಗಿದ್ದಾನೆ ಎಂಬುದನ್ನು ನಾನು ನಿಮಗೆ ನೆನಪಿಸುತ್ತೇನೆ. ನಮ್ಮ ದೈಹೀಕ ಜೀವಿತಕ್ಕೆ ಈ ಮೂರು ಅಂಶಗಳ ಅನ್ವಯವನ್ನು ನಾವು ಮಾಡಬಹುದಾಗಿದೆ: ದೇವರು ನಮ್ಮ ಭೌತಿಕ ಜೀವಿತವನ್ನು ನಮ್ಮ ಜನನದ ಸಮಯದಲ್ಲಿ ದಾನವಾಗಿ ಕೊಟ್ಟಿದ್ದಾನೆ (ನೋಡಿರಿ ಆದಿಕಾಂಡ 2:7; ಅಪೊಸ್ತಲರ ಕೃತ್ಯಗಳು 17:25), ಆತನು ತನ್ನ ದಯಾಳುವಾದ ಆಶೀರ್ವಾದಗಳನ್ನು ಕೊಡುವುದರ ಮೂಲಕ ಧೈಹಿಕ ಜೀವಿತದಲ್ಲಿ ಸಲಹುವವನಾಗಿದ್ದಾನೆ (ಮತ್ತಾಯ 5:45), ಮತ್ತು ಮುಂದೊಂದು ದಿನ ಆತನು ಈ ದೈಹಿಕ ಜೀವಿತವನ್ನು ಮರಣದಿಂದ ಪುನಃಸ್ಥಾಪಿಸುವನು (ಯೋಹಾನ 5:28, 29). ಹೀಗೆ, ಆತ್ಮೀಕ ಜೀವಿತಕ್ಕೆ ವಿಶೇಷ ಅನ್ವಯಗಳನ್ನು ನಾನು ಮಾಡಬಯಸುತ್ತೇನೆ:

- ದೇವರು ಆತ್ಮೀಕ ಜೀವಿತವನ್ನು ಕೊಡುವವನಾಗಿದ್ದು, ಆ ಜೀವಿತದ ಮೂಲವೂ ಆಗಿದ್ದಾನೆ (ನೋಡಿರಿ ಯೋಹಾನ 17:3). ಆತನ ಕೃಪೆಯ ಮೂಲಕ, ಪಾಪದಲ್ಲಿ ಮರಣಹೊಂದಿದವರು ಕ್ರಿಸ್ತನಲ್ಲಿ ಜೀವಿತರಾಗುವರು (ಎಫೆಸ 2:5).
- ದೇವರು ಆತ್ಮೀಕ ಜೀವಿತದ ಸಂರಕ್ಷಕನು ಆಗಿದ್ದಾನೆ. ಪೌಲನು "ಇದರ ನಿಮಿತ್ತದಿಂದಲೆ ಈ ಶ್ರಮೆಗಳನ್ನು ಅನುಭವಿಸುತ್ತಾ ಇದ್ದೇನೆ; ಆದರೂ ನಾನು ನಾಚಿಕೆಪಡುವುದಿಲ್ಲ; ನಾನು ನಂಬಿರುವಾತನನ್ನು ಬಲ್ಲೆನು; ಆತನು ನನ್ನ ವಶದಲ್ಲಿಟ್ಟಿರುವುದನ್ನು ಆತನು ಆ ದಿನಕ್ಕಾಗಿ ಕಾಪಾಡುವುದಕ್ಕೆ ಶಕ್ತನಾಗಿದ್ದನೆಂದು ದೃಢವಾಗಿ ನಂಬಿದ್ದೇನೆ" ಎಂದು ಹೇಳುತ್ತಾನೆ (2 ತಿಮೊಥೆ 1:12).
- ದೇವರು ಆತ್ಮೀಕ ಜೀವಿತವನ್ನು ಮರಳಿ ಕೊಡುವನು. ನಾವು ನಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ಆತನೆಡೆಗೆ ತಿರುಗಿದರೆ ಆತನು ನಮ್ಮಲ್ಲಿ ಸಂತೋಷವನ್ನೂ

ರಕ್ಷಣೆಯನ್ನು ಪುನಃ ಸ್ಥಾಪಿಸುವನು (ನೋಡಿರಿ ಕೀರ್ತನೆ 51:12).

ನೀನು ಜೀವವನ್ನು ಹೊಂದಬೇಕೆಂದು ದೇವರು ಬಯಸುವವನಾಗಿದ್ದಾನೆ ... ಆದರೆ ನೀವು ಆತನ ಉದಾರವಾದ ದೇವರ ಕೊಡುವಿಕೆಯ ಅವಕಾಶಗಳನ್ನು ಪಡೆದುಕೊಂಡಿದ್ದೀಯಾ?

- ನೀನು "ಕ್ರಿಸ್ತನಲ್ಲಿ" ದಿಕ್ಷಾಸ್ನಾನ ಹೊಂದಿದ್ದೀಯಾ (ರೋಮಾಪುರ 6:3; ಗಲಾತ್ಯ 3:26, 27) ಪಶ್ಚಾತ್ತಾಪಡುವ ವಿಶ್ವಾಸಿಯಂತೆ (ಅಪೊಸ್ತಲರ ಕೃತ್ಯಗಳು 2:36-38) ಹೀಗೆ ನೀನು "ಕ್ರಿಸ್ತನಲ್ಲಿ ಹೊಸ ಜೀವವನ್ನು" ಹೊಂದಬಹುದಲ್ಲವೇ (ರೋಮಾಪುರ 6:23)?
- ನೀನು ಕರ್ತನೊಂದಿಗೆ "ಹೊಸದಾದ ಜೀವಿತದಲ್ಲಿ" ನಡೆಯುತ್ತಿದ್ದೀಯಾ? (ರೋಮಾಪುರ 6:4) ಹಾಗಿದ್ದಲ್ಲಿ ಆತನು ನಿನ್ನ ಪಾಪಗಳನ್ನು ತೊಳೆದುಬಿಡುತ್ತಾನೆ (1 ಯೋಹಾನ 1:7) ಮತ್ತು ದಿನದಿಂದ ದಿನಕ್ಕೆ ನಿನ್ನನ್ನು ಬಲಗೊಳಿಸುವನಲ್ಲವೇ? (ಇಬ್ರಿಯ 13:5, 6)?
- ನೀನು ಸರಿಯಾದ ಮಾರ್ಗದಲ್ಲಿ ಇರುವುದಾದರೆ (ನೋಡಿರಿ ಯಾಕೋಬ 5:19, 20), ನೀನು ಕರ್ತನಲ್ಲಿ ತಾಳ್ಮೆಯಿಂದ, ಪಶ್ಚಾತ್ತಾಪದಿಂದ ಮತ್ತು ಪ್ರಾರ್ಥನೆಯಿಂದ ಅವನೆಡೆಗೆ ತಿರುಗಿಕೊಂಡರೆ (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9) ಆತನು ನಿನ್ನ ಆತ್ಮವನ್ನು ಪುನಃಸ್ಥಾಪಿಸುವನಲ್ಲವೇ (ನೋಡಿರಿ ಗಲಾತ್ಯ 6:1; ಕೀರ್ತನೆ 80:3, 7, 19)?

ದೇವರು ನಿನಗೆ ಕೊಡಬಯಸುವ ಜೀವಿತವನ್ನು ಅದರದಿಂದ ಸ್ವೀಕರಿಸುವಲ್ಲಿ ಯಾವ ಅವಶ್ಯಕತೆಯು ಇದೆ ಎಂದು ನೀನು ತಿಳಿದಿದ್ದಿ? ಹಾಗಿದ್ದಲಿ ನೀನು ಮಾಡುವುದನ್ನು ನಿಲ್ಲಿಸಬೇಡ! "ಹೀಗಿರುವುದರಿಂದ ಒಳ್ಳೇಯದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೇ ಇರುವವನು ಪಾಪಕ್ಕೊಳಗಾಗಿದ್ದಾನೆ" (ಯಾಕೋಬ 4:17).

---

ಟಿಪ್ಪಣಿಗಳು

[1]Adapted from Joseph L. Gardner, ed., *Who's Who in the Bible* (Pleasantville, N.Y.: Reader's Digest Association, 1994), 99. [2]ಗಂಡನು ಜೀವದಿಂದಿದ್ದಾದರೆ ಆತನು ಅರಸನಿಗೆ ತನ್ನ ಆಸ್ತಿಯನ್ನು ಮರಳಿಸಲು ಮನವಿ ಮಾಡಿಕೊಳ್ಳುತ್ತಿದ್ದನು. ಆ ಸ್ತ್ರೀಯು ಅರಸನಿಗೆ ಮನವಿ ಮಾಡಿದ ಸಮಯದಲ್ಲಿಯೇ (2 ಅರಸು 8:3, 5), ಅವಳ ಗಂಡನು ಪ್ರಾಯಶಃ ಮರಣ ಹೊಂದಿರಬೇಕು. ಆತನ ಕುಟುಂಬ ಫಿಲಿಷ್ಟೀಯ ದೇಶದಲ್ಲಿದ್ದಿರಬೇಕು, ಆದರೆ ವಚನ 1ರಲ್ಲಿ ಎಲೀಷನು ಆ ಸ್ತ್ರೀಗೆ ಆಕೆಯ ಮನೆಯವರ ಬಗೆಗೆ ಮಾತ್ರ ಮಾತನಾಡಿದ ವಾಸ್ತವತೆ ಅವರು ಫಿಲಿಷ್ಟಕ್ಕೆ ಹೋಗುವ ಮುನ್ನವೇ ಆಕೆಯ ಗಂಡನು ಸತ್ತಿದನು ಎಂಬುದ್ನು ಸೂಚಿಸುತ್ತದೆ. [3]ಇದು ಬಹುಶಃ 2 ಅರಸು 4:38ರಲ್ಲಿ ಸೂಚಿತವಾದ ಅದೆ ಬರವು ಇರಬೇಕು. ಈ ಪದಗುಚ್ಛವನ್ನು ಮುಂದಿನ ಪಾಠದಲ್ಲಿ ಪೂರ್ತಿಗೊಳಿಸವಾ. [4]Donald J. Wiseman, *1 and 2 Kings: An Introduction and Commentary*, Tyndale Old Testament Commentaries (Downers Grove, Ill.: Inter-Varsity Press, 1993), 213. [5]ಯೋರಾಮ ಮತ್ತು ಎಲೀಷರ ಮಧ್ಯದ ಸಂಬಂಧವು ವಿಸದ ಸಂಬಂಧವಾಗಿತ್ತು (ನೋಡಿರಿ 2 ಅರಸು 3:13, 14) ಅರಸನು ಎಲೀಷನ ಬಗೆ ತಿಳಿಯಲು ಬಯಸಿದ್ದಾದರಿಂದ ಆತನು ಪ್ರವಾದಿ ಗಿಂತಲೂ ಹೆಚ್ಚಾಗಿ ಆತನ ಸೇವಕನನ್ನು ಎಲೀಷನ ಬಗೆಗೆ ತಿಳಿಯಲು ಆಮಂತ್ರಿಸಿದ್ದನು. [6]C. F. Keil and F. Delitzsch, "1 and 2 Kings," *Commentary on the Old Testament,* vol. 3, *1 and 2 Kings, 1 and 2 Chronicles, Ezra, Nehemiah, Esther* (Peabody, Mass.: Hendriksen Publishers, 1989), 333. [7]Wiseman,

213. [8]James Burton Coffman and Thelma B. Coffman, *Commentary on Second Kings,* James Burton Coffman Commentaries, The Historical Books, vol. 6 (Abilene, Tex.: A.C.U. Press, 1992), 96. [9]J. Robert Vannoy, notes on 2 Kings, *The NIV Study Bible,* ed. Kenneth Barker (Grand Rapids, Mich.: Zondervan Publishing House, 1985), 536. [10]ಏಳು ವರುಷದ ಈ ಬರಗಾಲದಿಂದಾಗಿ, ನಾವು ಅಲ್ಲಿನ ಆದಾಯವು ಲಕ್ಷಿಕರಿಸಲಾಗದು; ಆದರೆ ಕೆಲವರು ಹೇಳಿದಂತೆ, "ಏನೂ ಇಲ್ಲದಿದ್ದಾಗ ಸ್ವಲ್ಪವಿದ್ದರೂ ಸಾಕು" ಎಂಬಂತೆ.

